66-(IV)

Regd No. M 1299 SATYAVADI Founded 1917

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 31 ಸಂಚಿಕೆ 30] ಸೋಮವಾರ 3—11—47 [[ಪ್ರತಿ ಪೈ

ಪಾಕಿಸ್ತಾನ್ ಮೇಲೆ ಸಮರ ಘೋಷಣೆ

ಕಾಶ್ಮೀರ ಒಕ್ಕಟ್ಟು ಬಿಗಿಡಾಗಿಯೇ ಇದೆ. ಕಾಶ್ಮೀರ ರಕ್ಷಣೆಗಾಗಿ ರವಾನೆಯಾಗುತ್ತಿರುವ ಭಾರತ ಸೈನ್ಯದ ಸಂಖ್ಯೆ ವಿಪರೀತವಾಗಿದೆ,

ವಿಮಾನಗಳೆಲ್ಲಾ ಕಾಶ್ಮೀರದ ರಕ್ಷಣೆಗಾಗಿ ಹಾರಿಹಾರಿ ಹೋಗುತ್ತಿವೆ. ಸೇನಾ ಸೌಲಭ್ಯ ವಿನಃ ವಿವಾನ ಯಾತ್ರಿ ಮಹಾತ್ಮರಿಗೂ ಇಲ್ಲ ಎಂದು ಕೇಂದ್ರ ಪ್ರಭುತ್ವ ಪ್ರಕಟಿಸಿರುವುದಾಗಿ ಹೇಳಲಾಗಿದೆ,

ಪಾಕಿಸ್ತಾನ ಪಾಲಿಸುತ್ತಿರುವ ಪ್ರಕ್ಷುಬ್ಧ ನೀತಿ ನಿಲ್ಲದಿದ್ದರೆ, ಭಾರತವು ಪಾಕಿಸ್ತಾನ ಮೇಲೆ ರಣಘೋಷಣೆ ಘೋಷಿಸುವುದು ಅನಿವಾರ್ಯ ಎಂದೂ ಹೇಳಲಾಗಿದೆ.

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ.... ಗ್ರಹಗತಿಗಳು ಕ್ರೂರವಾಗಿರುತ್ತವೆ. ವ್ಯಾಧಿಗ್ರಸ್ಥರಾಗಬಹುದು. ಆರ್ಥಿಕ ಮುಗ್ಗಟ್ಟಿದೆ.

ವೃಷಭ—ಲಾಭದಾಯಕ ಸಂತೋಷಕರವಾದ ವಾರ. ವಿಘ್ನಗಳು ದೂರವಾಗಿ ಸುಖ ಲಭಿಸುವುದು.

ಮಿಥುನ— ಲಾಭಕ್ಕೆ ತಕ್ಕ ಖರ್ಚು ವ್ಯವಹಾರದಲ್ಲಿ ಜಯ.

ಕರ್ಕಾಟಕ— ಶಾಂತಿ ರೀತಿಯಿಂದ ವರ್ತಿಸಿದಲ್ಲಿ ವ್ಯವಹಾರದಲ್ಲಿ ಜಯ. ಮನೋವ್ಯಥೆ ಕಾಣಬರುತ್ತದೆ.

ಸಿಂಹ— ಕೀರ್ತಿ ಶ್ರಮಕ್ಕೆ ತಕ್ಕ ಫಲ ಲಭಿಸುತ್ತದೆ ಆರೋಗ್ಯ ಉತ್ತಮವಾಗಿರುತ್ತೆ.

ಕನ್ಯಾ— ಆರ್ಥಿಕ ಸ್ಥಿತಿ ಉತ್ತಮ. ಆರೋಗ್ಯ ಉತ್ಸಾಹವಿರುತ್ತದೆ

ತುಲ— ಅನುಕೂಲವಾದ ಗ್ರಹಗತಿಗಳಿರುವ ವಾರ. ಆರ್ಥಿಕ ಲಾಭವಿದೆ

ವೃಶ್ಚಿಕ— ವ್ಯವಹಾರದಲ್ಲಿ ಕೆಲವು ತೊಂದರೆಗಳು ಬರುತ್ತವೆ, ಆದರೆ ನಷ್ಟ ಬರುವುದಿಲ್ಲ. ಆರೋಗ್ಯ ಪ್ರತಿಷ್ಠೆಯುಂಟು.

ಧನಸ್ಸು— ದುಡುಕದೆ ವ್ಯವಹಾರದಲ್ಲಿ ಮಗ್ನರಾದರೆ ಜಯವಿದೆ. ಆರೋಗ್ಯ ನೆಟ್ಟಗೆ.

ಮಕರ—ಮನೋವ್ಯಥೆಯಿಂದ ಕೂಡಿದ ವಾರ. ಮನಸ್ಸಿನಲ್ಲಿ ನಿರುತ್ಸಾಹ ಹೆಚ್ಚಾಗಿರುತ್ತದೆ. ಮಿತ್ರ ಸಹಾಯ ದೊರೆಯಬಹುದು.

ಕುಂಭ— ಕಾರ್ಯಗಳು ನಿರ್ವಿಘ್ನವಾಗಿ ನಡೆಯುತ್ತವೆ. ಆರ್ಥಿಕ ಸ್ಥಿತಿ ಉತ್ತಮ, ವ್ಯವಹಾರದಲ್ಲಿ ಭಯ.

ಮೀನ— ನಿಮ್ಮ ಉತ್ಸಾಹಕ್ಕೆ ತಕ್ಕ ಪ್ರತಿಫಲ ಹೊಂದುವಿರಿ. ಆರ್ಥಿಕ ಲಾಭವುಂಟು.

ಬೇಲಿಯೇ ಹೊಲ ಮೆಯ್ಯುವಂತೆ!

ಅಮೇರಿಕಾ ಸಂಯುಕ್ತ ರಾಷ್ಟ್ರಗಳ ರಾಯಭಾರಿಯಾಗಿ ಇಂಡಿಯಾ ಸರಕಾರವು ಅಸಫಾಲಿಯನ್ನು ನೇಮಕ ಮಾಡಿತು. ಕೆಲವು ದಿನಗಳ ಕೆಳಗೆ ಪತ್ರಿಕೆಗಳಲ್ಲಿ ಅಸಫಾಲಿ ಪಾಕಿಸ್ತಾನ ಮೌಲ್ವಿ ಜಿನ್ನಾವರಿಗೆ ನಡೆಸಿದ ಉತ್ಕೃಷ್ಟ ಶುಶ್ರೂಷೆಗಳು ಪ್ರಕಟಿಸಲ್ಪಟ್ಟವೆ. ಅವುಗಳಂತೆ ಆಯುಧಗಳನ್ನು ವಿಶೇಷವಾಗಿ ಇಂಡಿಯಾ ರಾಯಭಾರಿ ಹುದ್ದೆಯಲ್ಲಿ ಅಸಫಾಲಿ ಪಾಕಿಸ್ತಾನ ಸರಕಾರಕ್ಕೆ ಕಳುಹಿಸುತ್ತಿರುವಂತೆ ತಿಳಿಯಬರುತ್ತದೆ. ಕಳೆದ ವಾರ ಮಧ್ಯರಾಷ್ಟ್ರದಲ್ಲಿ ಇತರ ಪ್ರದೇಶಗಳಲ್ಲಿಯೂ ಆಯುಧ ಗಳನ್ನು ಮುಸ್ಲಿಂರು ಹೇಗೆ ಶೇಖರಿಸಿಟ್ಟುಕೊಂಡಿದ್ದರೋ ಎಲ್ಲರೂ ತಿಳಿದಿರುವ ವಿಷಯವೇ ಇದನ್ನು ಹಿಡಿದು ಮುಸ್ಲಿಮರ ಬಹಳ ಕಾಲದಿಂದ ಆಯುಧ ಜಮಾವಣೆಯ ಯತ್ನದಲ್ಲಿ ನಿಮಗ್ನರಾಗಿರುವಂತೆ ನಿರ್ಧರಿಸಬೇಕಾಗುತ್ತದೆ. (ಶ್ರ)

ಹರಿಜನ ದೇವಾಲಯ ಪ್ರವೇಶ

ಬೆಂಗಳೂರು ಸೆ 1— ಕಾ ನಿ ಸಚಿವ ಶ್ರೀ ಭಾಷ್ಯಕಾರ ಸಮ್ಮುಖದಲ್ಲಿ ಹನ್ನೆರಡು ಮಂದಿ ಹರಿಜನರು ಒಳಪೇಟೆಯಲ್ಲಿರುವ ಶ್ರೀ ವೈಷ್ಣವ ದೇವಾಲಯ ಶ್ರೀನಿವಾಸಸಮಂದಿರ ಪ್ರವೇಶ ಮಾಡಿದರು. ಭಾಷ್ಯಂಕರು ಪೂತನಾಡುತ್ತಾ, ಶ್ರೀ ರಾಮಾನುಜರವರು ಹರಿಜನರ ಮಿತ್ರರು ಎಂದು ತಿಳಿಸಿದರು.

Save the Cow

ಗೋ ವಧೆ ನಿಲ್ಲಲಿ

Edited, Printed and Published by M. S Krishna Rao at the Satyavadi Press Chamaarja Agahar Myrsore.

ಇಂದಿರಳ ಸೀರೆ

ಅಂಜನ್ನೆಳದವನಿಗೆ

ಹೆಹರುಗಳು ಕೆನ್ನೆಗೆ ಕೊಟ್ಟರು

ಗಾಂಧೀ ಮತ್ತು ನೆಹರೂರವರು ಇತ್ತೀಚೆಗೆ ಹರಿದ್ವಾರಕ್ಕೆ ಸಂದರ್ಶನವಿತ್ತಾಗ, ಓರ್ವ ನಿರಾಶ್ರಿತನು ಶ್ರೀಮತಿ ಇಂದಿರಾ ಗಾಂಧಿಯವರ (ಪಂಡಿತ ಜವಹರಲಾಲರ ಕುವರಿ) ಸೀರೆಯ ಒಂದು ಅಂಚನ್ನು ಎಳೆದುದಕ್ಕೆ ಜವಾಹರರು ಅವನಿಗೆ ಕೆನ್ನೆಗೇಟು ಏರಿಸಿದರಂತೆ. ಆ ನಿರಾಶ್ರಿತನು ಜವಹರರನ್ನು ಉದ್ದೇಶಿಸಿ ' ಮಹನೀಯರೇ, ನಿಮ್ಮ ಮಗಳ ಸೀರೆಯ ಒಂದು ಅಂಚನ್ನು ಬರೇ ಮುಟ್ಟಿದ್ದಕ್ಕೆ ನಿಮಗೆ ಸಿಟ್ಟೇರಿ ನೀವು ನನ್ನ ಕೆನ್ನೆಗೇರಿಸಿದಿರಿ. ಹೀಗಿರುವಾಗ ನಾವು ನಮ್ಮ ಹೊಡಹುಟ್ಟಿದ ಸಹೋದರಿಯರ, ನಮ್ಮ ಪತ್ನಿಯರ ಮಾನಾಪಹರಣ ಬಗ್ಗೆ ಪ್ರತೀಕಾರ ಕೈಕೊಳ್ಳಬಾರದೆಂದೇಕೆ ಉಪದೇಶಿಸುವಿರಿ ' ಎಂದು ಕೇಳಿದ. ಅದಕ್ಕೆ ಪಂಡಿತ ನೆಹರು ಏನು ಉತ್ತರ ಕೊಟ್ಟರೆಂಬುದು ತಿಳಿದುಬಂದಿಲ್ಲ [ಪ್ರ]

ಮೈಸೂರು ಸೆ 1— ವಿಜಯೋತ್ಸವ ಪ್ರಯುಕ್ತ ಕನ್ನೇಗೌಡನ ಕೊಪ್ಪಲಿನ ಯುವಕ ಸಂಘದವರು 30 ಜೊತೆ ಎತ್ತಿನ ರಥದಲ್ಲಿ ರಾಷ್ಟ್ರನಾಯಕರ ಪಠಗಳ ಮೆರವಣಿಗೆಯನ್ನು ವೈಭವದಿಂದ ನಡೆಸಿದರು — ಟೌನ್‌ಹಾಲ್ ಆವರಣದಲ್ಲಿ ಪ್ರಚಂಡ ಸಭೆ ನಡೆದು ರಾಷ್ಟ್ರ ನಾಯಕರನ್ನು ಅಭಿನಂದಿಸುವ ಠರಾವಾದವು — ಕೋರ್ಟಿನ ಮುಂದಿನ ಚೌಕಕ್ಕೆ ಸುಭಾಷ್ ಸರ್ಕಲ್ ಎಂದು ಹೆಸರಿಡಲಾಯಿತು — ಪಂಚಲೋಹದ್ರವ ಒಳಗುಂಡಿನೇಟಿಗೆ ಒಳಿಯಾದ ರಾಮಸ್ವಾಮಿ ಸ್ಮಾರಕಾರ್ಥ ಆ ಚೌಕಕ್ಕೆ ' ರಾಮಸ್ವಾಮಿ ಸರ್ಕಲ್ ' ಎಂದು ನಾಮಕರಣವಾಯಿತು — ನಗರದ ಅನೇಕಾನೇಕ ಮನೆ, ಅಂಗಡಿ, ಸಂಸ್ಥೆಗಳಲ್ಲಿ ಉತ್ಸವ ಆಚರಿಸಲ್ಪಟ್ಟಿತು. —ಅರಮನೆ ದೀಪೋತ್ಸವ ಬೆಳಗಿತು.

ಹೈದರಾಬಾದಿನಲ್ಲಿ ಮುಸ್ಲಿಂ ನೇರ ಕಾರ್ಯಾಚರಣೆ ಪ್ರಾರಂಭವಾದರೆ, ಅಲ್ಲಿ ಹಿಂದೂ ಮತ್ತು ರಾಷ್ಟ್ರೀಯ ಮುಸ್ಲಿಮರ ರಕ್ಷಣೆಯನ್ನು ನೋಡಿಕೊಳ್ಳಲು ಭಾರತ ಸೇನೆ ಹೈದರಾಬಾದು ಸಂಸ್ಥಾನದ ಗಡಿಯಲ್ಲಿ ಕೋಟೆಯಂತೆ ನಿಂತಿರುವುದಾಗಿ ಹೇಳಲಾಗಿದೆ.

ಮೈಸೂರು ಸಿಟಿ ಮುನಿಸಿಪಲ್ ವೈಸ್‌ಪ್ರೆಸಿಡೆಂಟ್ ರವರ ಆಫೀಸಿನಿಂದಾ—

ಇದರಿಂದ ಮೈಸೂರಿನ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

1947 ನೇ ನವೆಂಬರ್ ತಾರೀಖು 5 ನೇ ಬುಧವಾರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 4 ಗಂಟೆವರಿವಿಗೆ ನೀರಿನ ಟ್ಯಾಂಕುಗಳನ್ನು ರಿಪೇರಿ ಮಾಡಬೇಕಾಗಿರುವುದರಿಂದ ಆ ಕಾಲದಲ್ಲಿ ನೀರಿನ ಸರಬರಾಜನ್ನು ನಿಲ್ಲಿಸಲಾಗುತ್ತೆ. ಎಲ್ಲಾ ಪುರನಿವಾಸಿಗಳೂ ಇದಕ್ಕೆ ಮುಂಚಿತವಾಗಿ ನೀರನ್ನು ಶೇಖರಿಸಿಕೊಳ್ಳಬೇಕಾಗಿ ಈ ಮೂಲಕ ತಿಳಿಯಪಡಿಸಿದೆ.

(ಸಹಿ) ಟಿ. ನರಸಿಂಹಯ್ಯಂಗಾರ್
ವೈಸ್‌ಪ್ರೆಸಿಡೆಂಟ್

ತಾ || 3—11—47

ತಾ॥ 3-11-47 ॥ಶ್ರೀ॥ ನಂ. 60

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ: ಗುಂಡ್ಮಿ ಮೆಹಾಬಲಭಟ್ಟ, ವೇದಶಾಂತಶಿರೋಮಣಿ ವೇಗಾತಿತವಿಶಾರದ
ಸಂಘದ ಕಾರ್ಯದರ್ಶಿ, ದೂವರ್ಸಪುರಂ, ಶಿವಮೊಗ್ಗ ಜಿಲ್ಲಾ

ಸಾಮ್ಯವಾದಿಯೂ ಸನಾತನಧರ್ಮವೂ

(ಶ್ರೀ ವಸಂತಕುಮಾರ ಚಟ್ಟೋಪಾಧ್ಯಾಯ, ಎಂ.ಎ)

(ಮುಂದುವರಿದುದು)

ಯಾವುದೇ ವ್ಯಕ್ತಿಯು ದುಃಖನಿವೃತ್ತಿಗಾಗಿ ಪ್ರಯತ್ನಮಾಡಿದಾಗ ಸ್ವಲ್ಪವಾ ಅವನ ವಾಸ್ತವಿಕವಾದ ಉಪಕಾರವನ್ನೆ ಮಾಡಲಾಗುವುದಿಲ್ಲ ಹಲವು ವೇಳೆ ದುಃಖವು ಹಿತಕರವಾಗುತ್ತದೆ. ದುಃಖದ ಕಿಚ್ಚಿನಲ್ಲಿ ಬೆಂದು ಚಿತ್ತದ ಮೊಲಿನ್ನೆಯು ಹೊಮ್ಮವಾಗುವುದಿ. ಅದು ಶುದ್ಧಿಕಾಗುವುದು. ಹಾಗಿಲ್ಲದಿದ್ದರೆ ಪರಮದಯಾಳುವಾದ ಭಗವಂತನೆ ವಿಧಾನದಲ್ಲಿ ದುಃಖವು ಸೃಷ್ಟಿಯೇ ಆಗುತ್ತಿರಲಿಲ್ಲ ಯಾವ ಜನರು ಸುಖ ಮತ್ತು ಎಲ್ಲಾಸದ ಮಾತಾವರಣದಲ್ಲಿ ಲಾಲಿತ ಪಾಲಿತರಾಗುವರೋ ಅವರಲ್ಲಿ ಸಾಮಾನ್ಯವಾಗಿ ಅನೇಕ ವ್ಯಕ್ತಿಗಳು ಮನುಷ್ಯತ್ವದಲ್ಲಿ ವಂಚಿತರಾಗಿ ಬಿಡುತ್ತಾರೆ. ಶೋಕದಲ್ಲಿ ಈವರೆಗೆ ಅಪೇಕ್ಷಿಸಿದ ಶ್ರೇಷ್ಠ ಮನುಷ್ಯರು ಆಗಿ ಹೋಗಿರುವರೋ, ಅವರೊಳಗೆ ಅಧಿಕತರ ವ್ಯಕ್ತಿಗಳು ಅಭಾವ ಹಾಗೂ ದುಃಖದಲ್ಲಿಯೇ ಬಳೆದಿರುವರು. ಇದಕ್ಕಾಗಿ ಯೂ ಕೂಡ ಪರದುಃಖ ವಿಮೋಚನವು ಜೀವನದ ಉದ್ದೇಶವಾಗಲಾರದು, ಏಕೆಂದರೆ ನಾವು ಯಾವುದೇ ವ್ಯಕ್ತಿಯ ದುಃಖ ವಿಮೋಚನ ಮಾಡಿ ಅವನಿಗೆ ವಾಸ್ತವಿಕವಾದ ಉಪಕಾರವನ್ನು ಮಾಡಬಲ್ಲವೇ ಅಥವಾ ಇಲ್ಲವೇ ಎಂಬುದನ್ನು ಯಾರು ಹೇಳಬಲ್ಲರು? ಆದಾಗ್ಯೂ ಪರದುಃಖ ವಿಮೋಚನವು ಜೀವನದ ಉದ್ದೇಶವಲ್ಲದಿದ್ದರೂ ಕೂಡ ಪರದುಃಖ ವಿಮೋಚನಕ್ಕಾಗಿ ನಾವು ಪ್ರಯತ್ನ ಮಾಡಬೇಕು, ಉಪಯುಕ್ತ ಪಾತ್ರದಲ್ಲಿ ಪಾತ್ರ ಮಾಡುವುದರಿಂದ ಆ ದಾನದಿಂದ ಲೇನಾಸ್ಟವಾಗುವುದಿಲ್ಲ, ಬದಲಿಗೆ ಹುಟ್ಟಾವಧಿ ದಾನ ಮಾಡುವುದರಿಂದ ನಮ್ಮ ಚಿತ್ತವು ಶುದ್ಧವಾಗುವುದು ಈಶ್ವರನ ಆಜ್ಞೆಯೆಂದು ತಿಳಿದು ಅನ್ಯಾನ್ಯ ಆಜ್ಞಾಪಾಲನದೊಟ್ಟಿಗೆ ದಾನೆ ಮಾಡುವುದು ಉಚಿತವಾಗಿದೆ.

ಈಶ್ವರ ಪ್ರಾಪ್ತಿಯೇ ಮಾನವಜೀವನದ ಮುಖ್ಯ ಉದ್ದೇಶವೆಂದೂ ಪರೋಪಕಾರದ ಪ್ರಯತ್ನವು ಈ ಉದ್ದೇಶ ಪ್ರಾಪ್ತಿಗೆ ಸಹಾಯಕವಾದ ಉಪಾಯವೆಂದೂ ಹಿಂದೆ ಹೇಳಿಯಾಗಿದೆ. ಜಡರೆ ಪರೋಪಕಾರಪ್ರಯತ್ನವು ಈ ಉದ್ದೇಶ ಪ್ರಾಪ್ತಿಗೆ ವಿಕಪಾತ್ರೋಪಾಯವಲ್ಲ, ಸುಪಾತ್ರವಲ್ಲ—ಸರ್ವ ಶ್ರೇಷ್ಠವಾದ ಉಪಾಯವೂ ಅಲ್ಲ ಶ್ರೇಷ್ಠ ಉಪಾಯವು ಈಶ್ವರ ಭಕ್ತಿ, ಈಶ್ವರಾರಾಧನೆ. ದೇವಾಲಯ ಇಲ್ಲವೆ ಚರ್ಚಿನಲ್ಲಿ ಈಶ್ವರ ಆರಾಧನೆ ಗೆಯ್ಯುವುದರಲ್ಲಿ ಆನು ಕೊಲ್ಯವಿದೆ. ಸುಲಭದಲ್ಲಿ ಈಶ್ವರನಮೇಲೆ ಭಕ್ತಿಯು ಉದಯಿಸುವಾಗುತ್ತೆದೆ. ಆದ್ರಿಂದ ಪರೋಪಕಾರದ ಕಾರಣದಿಂದ ದೇವಾಲಯ ಅಥವ ಚಿಗರ್ಚಿಯನ್ನು ಪರಿತ್ಯಾಗ ಮಾಡುವುದು ಯುಕ್ತ ಯುಕ್ತವಾಗುವುದಿಲ್ಲ. ಶ್ರೀ ರಾಮಕೃಷ್ಣ ಪರಮಹಂಸರು ಹೇಳಿರುವುದೇನೆಂದರೆ—"ನಾನು ಪರರ ದುಃಖವನ್ನು ದೂರಗೊಳಿಸುವೆನು" ಎಂಬ ಅಭಿಮಾನವಿರುವುದು ಪಾಪ, ದೇವರ ಹತ್ತಿರ ಅಲ್ಪವಾದ ಸಕ್ತಿಯು, ಮತ್ತು ಆಸ್ಪತ್ರೆಯನ್ನು ಕೋರಲೆ? ಇಲ್ಲ, ಹೇ ಈಶ್ವರ! ನನಗೆ ದರ್ಶನವೀಯು! ಎಂದು ಹೇಳುವೆ—ಯಾರಿಗೆ ಬುದ್ಧಿಯಿಲ್ಲವೊ, ಅವನು ಕಾಳಿಘಾಟಿಗೆ ಹೋಗಿ ಭಿಕ್ಷುಕರಿಗೆ ಡುಡ್ಡು ಹಂಚುವಾಗ ಭಿಕ್ಷುಕರ ತಂಡದಲ್ಲಿ ಕವಿಯುಲ್ಪಡುವನು ತಾಯಿಯು ದರ್ಶನ ಹೊಂದಿದಾರನು.

ಸಾಮ್ಯವಾದೀ ರಷ್ಯವು ಪರೋಪಕಾರವೆ ಧರ್ಮವೇತರವನ್ನು ತೊಟ್ಟು ಕೊಂಡು ಧರ್ಮದ ಮೇಲೆ ಅಕ್ರಮಣ ಮಾಡಿದೆ. ಅಡುಡರಿಂದ ಅಲ್ಲಿ ಅನೇಕ ಪಾದ್ರಿ—ಪ್ರಮೋದ್ಗಿ, ಥಿಯೋಟರ್, ಸಿನೇಮಾ ವ್ಯವಹಾರಾದುವುಗಳನ್ನು ನಿಷೇಧ ಮಾಡಿಲ್ಲ. ರಷ್ಯದಲ್ಲಿ ಪರೋಪಕಾರಕ್ಕಿಂತ ಒರಿದುವೇಳೆ ಈ ಎಲ್ಲ ಅನೇಕ ಪಾದ್ರಿ—ಪ್ರಮೋದದ ಅಜ್ಞೆಸ್ಯ ಖರ್ಜನ್ನು ತಡೆಗಟ್ಟಿದ ಪಕ್ಷದಲ್ಲಿ ಆಗ ಅವರು ಪರೋಪಕಾರ ಸಾಧನೆಯನ್ನೇ ತಮ್ಮ ಜೀವನದ ಶ್ರೇಷ್ಠ ವ್ರತದ ರೂಪದಲ್ಲಿ ಸ್ವೀಕರಿಸಿದ್ದಾರೆಂದು ತಿಳಿಯು ಬಹುದಾಗಿತ್ತು. ಮತ್ತು ಸಾಮ್ಯವಾದೀ ರಷ್ಯವು ಇಂದ್ರಿಯಜನ್ಯ ಸುಖಭೋಗವನ್ನೇ ಜೀವನದ ಉದ್ದೇಶ್ಯರೂಪದಲ್ಲಿ ಗ್ರಹಣ ಮಾಡಿದೆ. ಮತ್ತು ಧರ್ಮವನ್ನು ಈ ಉದ್ದೇಶ್ಯಕ್ಕೆ ಪ್ರತಿಕೂಲವೆಂದೇ ತಿಳಿದು ಅದು ಧರ್ಮಕ್ಕೆ ವಿರುದ್ಧವಾಗಿ ಪ್ರಚಾರ ಹಡೆ ಘೋಷಣೆ ಮಾಡಿದೆ. ಧರ್ಮ ವರ್ಜಿತವಾದ ಇಂದ್ರಿಯ ಸುಖ ಭೋಗ ವನ್ನೆ ನುಸರಿಸಿ ಅದು ನಿತ್ಯಾರತೆ ಅನ್ಯಾಯ ಮತ್ತು ವ್ಯಭಿಚಾರದ ಪಥದಲ್ಲಿಯೇ ಅಗ್ರೇಸರವಾಗಿದೆ. ರಷ್ಯವನ್ನು ಆದರ್ಶವೆಂದು ತಿಳಿದು ಅದರ ಅನುಸರಣೆ ಮಾಡುವೆ ನೆನ್ನುವ ಆಧುನಿಕ ಭಾರತೀಯ ಯುವಕರು ಒನ್ನು ಈ ತಥ್ಯದ ಕಡೆಗೂ ಗಮನವೀಯುವರೆ?

Woodlands

Morning Shows at 10-30
From 31—10—47 For 7 days

The Black Panther

— starring —
Frankies Thomas
Frances Robinson
Jack Mulhall
Alseean

Woodlands

From 31—10—47

ಅತೀವ ಕುತೂಹಲಕರವಾದ
ವೀರರಾ, ಪ್ರಾಣಿಗಳೂ, ಪ್ರಕೃತಿಯಹಿಡಿದಿವ

ಶಿಕಾರಿ

(ಅಮೋಘ ಹಿಂದಿ ಚಿತ್ರ)
ಪ್ರತಿದಿನ 3 ಆಟಗಳು

At Opera!

MAD-MAN

Dancing Masters

2nd Glorious Week

— with —
N.S.Krishnan, T A Maduram
Morning Shows from 1-11-47
with Laural & Hardy

ಜಾತಿವ್ಯವಸ್ಥೆಯ ಭವಿಷ್ಯ

(ಆಚಾರ್ಯ ಪೀಠಾಧಿಪತಿ ಶ್ರೀ ರಾಘವಾಚಾರ್ಯ ಸ್ವಾಮಿಗಳು)

ಈ ದೇಶದ ಅಥವಾ ಹಿಂದೂ ಸಮಾಜದ ಪರಾಧೀನತೆಯು ಇತಿಹಾಸವು ಜಾತಿ ವ್ಯವಸ್ಥೆಗೆ ಸಂಬಂಧಿಸಿದೆಯೆಂದು ಭಾರತದ ಸ್ವತಂತ್ರ ವಿಚಾರಕರ ಹೇಳಿಕೆ. ನವೆಗೆ ಅವರ ಈ ಕಥನದಲ್ಲಿ ಅಸಹನುತಿಯಿಲ್ಲ, ಆದರೆ ಜಾತಿ ಭೇದದ ದೆಸೆಯಿಂದಲೇ ಹಿಂದುಗಳು ಪರಾಧೀನರಾದರೆಂಬೀ ಅವರ ಧಾರಣೆಯು ನಮ್ಮ ಇತಿಹಾಸಕ್ಕೆ ಸಂಪೂರ್ಣ ವಿಪರೀತವಾದುದು. ವಾಸ್ತವದಲ್ಲಿ ಜಾತಿಧರ್ಮದ ಶಿಥಿಲತೆಯಿಂದಲೇ ಹಿಂದೂ ಸಮಾಜದ ಪತನವು ಅರಂಭವಾಯಿತು. ಸೆದಾ ಕಾಲದಿಂದ ವಿದೇಶೀ ಜನರು ನಮ್ಮ ಜಾತಿ ವ್ಯವಸ್ಥೆಯನ್ನು ಕೆಡಿಸಿವ ಪ್ರಯತ್ನಗಳನ್ನು ಮಾಡಿದ್ದಾರೆಂದು ಹೇಳಬೇಕಾದ್ದಿಲ್ಲ; ಎಂದಿನಿಂದ ಯೂರೋಪೀಯ ಜನರು ಭಾರತಭೂಮಿಯು ಮೇಲೆ ಪದಾರ್ಪಣ ಮಾಡಿದರೋ, ಅಂದಿನಿಂದತೂ ಈ ಪ್ರಯತ್ನಗಳು ಉಗ್ರರೂಪವನ್ನು ಧಾರಣ ಮಾಡಿದುವು. ಒಂದು ಕಡೆ ಯಾದರೆಯೂ ಮಿಷನರಿಗಳು ಜಾತಿ ಭೇದವನ್ನು ನಿಂದಿಸಿದರು, ಇನ್ನೊಂದು ಕಡೆಯಲ್ಲಿ ಪಾಶ್ಚಾತ್ಯ ಶಿಕ್ಷಣವು ಈ ವ್ಯವಸ್ಥೆಯ ಮೇಲೆ ಉದಾಸೀನತೆಯ ಭಾವನೆಯನ್ನು ಜಾಗೃತಗೊಳಿಸಿತು. ಫಲತಃ ಕಳೆದ ಶತಮಾನದಲ್ಲಿ ಸಮಾಜ ಸುಧಾರಣೆಯ ಹೆಸರಿನಲ್ಲಿ ಅನೇಕ್ಯ ಜಿಳುವಳಿಗಳು ಉದಿಸಿದವು. ಅವುಗಳಲ್ಲಿ ಈ ವ್ಯವಸ್ಥೆಯನ್ನು ಅಳಿಸುವುದಕ್ಕೆ ಪ್ರಯತ್ನಗಳಾದವು. ಬ್ರಾಹ್ಮ ಸಮಾಜ, ದೇವ ಸಮಾಜ, ಪ್ರಾರ್ಥನಾ ಸಮಾಜ, ರಾಮಕೃಷ್ಣ ಮಿಷನ್, ಆರ್ಯ ಸಮಾಜ ಮೊದಲಾದ ಎಲ್ಲವೂ ಜಾತಿ ಭೇದವನ್ನು ಹೇಯಣೆತನೆಂದುವು. ರಾಜನೀತಿಕ ಸಂಸ್ಥೆಗಳ ಮೂಲಕವಾಗಿಯೂ ಸಮಾಜ ಸುಧಾರಕರು (ವಿನಾಶಕರು?) ಜಾತಿ ವ್ಯವಸ್ಥೆಗೆ ವಿರುದ್ಧವಾಗಿ ಪ್ರಚಾರ ಮಾಡುವ ತತ್ಪರತೆಯನ್ನು ತೋರಿಸಿದರು. ಗಾಂಧಿಗಳ ನೇತೃತ್ವದಲ್ಲಿ ಕಾಂಗ್ರೆಸ್ ಹರಿಜನ ಚಳವಳಿಗೆ ಜನ್ಮವಿತ್ತಿತು. ಮುತ್ತಿಂದು ರಾಜನೀತಿಕ (ಧರ್ಮಹೀನ) ಮುಖಂಡರು ಜಾತಿಭೇದವನ್ನು ಹೊಟ್ಟೆ ತುಂಬ ನಿಂದಿಸುವುದು ಕರ್ತವ್ಯವೆಂದು ತಿಳಿಯುತ್ತಾರೆ

(ಸಶೇಷ)

ಸಕರೇ ಸಿಕದೆ

— ಆತ್ಮಹತ್ಯ —

ಇದು ಬಸಗಾನಪಲ್ಲಿ ಜಮಿಾಂದ್ದಾರಿಯಿಂದ ಬಂದಿರುವ ಸಮಾಚಾರ- ಶಾನುಭೋಗ ಶೇಷಯ್ಯನೆಂಬಾತನ ಹೆಂಡತಿಯು ಪ್ರಸವಿಸಿದ್ದರಿಂದ ಪಥ್ಯಕ್ಕಾಗಿ ಜರೂರಾಗಿ ಸಕ್ಕರೆ ಬೇಕಾಗಿದ್ದುದರಿಂದ ಅತನು ಆಹಾರ ಮುಖ್ಯಸ್ಥರನ್ನೆಲ್ಲ ಕಂಡು ತನ್ನ ವಿಚಾರವನ್ನು, ವಿನಯಪೂರ್ವಕವಾಗಿ ಅರಿಕೆ ಮಾಡಿಕೊಂಡನು.

ಕರ್ಕಶಹೃದಯನಾದ ಅಧಿಕಾರಿಯು ಗರ್ವದೊಡನೆ ಶಾನುಭೋಗನನ್ನು ಬಾಯಿಗೆ ಬಂದಂತೆ ಬೈದು ' ಸಕ್ಕರೆಗೆ ಗತಿಯಿಲ್ಲದವನು ಏಕೆ ಹೆಂಡತಿಯ ಸಹವಾಸ ಮಾಡಿ ಮಕ್ಕಳನ್ನು ಹುಟ್ಟಿಸುತ್ತಿರುವೆ ?' ಎಂದು ದೊಡ್ಡ ಮನುಷ್ಯರ ಎದುರಿನಲ್ಲಿ ದೂಷಿಸಿದನಂತೆ. ಅಘಾತನಾದರೂ ಎದುರಿಸಿ ಮಾತನಾಡಲು ಧೈರ್ಯಸಾಲದೆ ಒಳಗೊಳಗೆ ವ್ಯಸನ ಪಡುತ್ತಾ ಅಲ್ಲಿಂದ ಹೊರಟು ತಾಲ್ಲೂಕು ಅಧೀನ ಗುಮಾಸ್ತರಿಗೆ ವಿಷಯವನ್ನೆಲ್ಲಾ ತಿಳಿಸಿ ಹಸಿವಾಗುವಂತೆ ಅತ್ತನಂತೆ. ಪಾಪ ಆ ಗುಮಾಸ್ತರು ಏನು ಮಾಡಬಲ್ಲರು ? ಸಮಾಧಾನ ಉಂಟಾಗುವಂತೆ ಎಷ್ಟು ಹೇಳಿದರೂ ಅತನಿಗೆ ಅವಮಾನವನ್ನು ಸಹಿಸಕೊಳ್ಳಲಾಗಲಿಲ್ಲ.

ಮನೆಗೆ ಹೋಗುತ್ತಲೂ ಈತನ ಆಗಮನವನ್ನೇ ನಿರೀಕ್ಷಿಸುತ್ತಿದ್ದ ಅತನ ಹೆಂಡತಿಯು ' ಔಷಧಿಗೆ ಸಕ್ಕರೆ ತಂದಿರಾ ' ಎಂದು ಅತುರದಿಂದ ಪ್ರಶ್ನಿಸಲು, ನಡೆದ ಅವಮಾನವನ್ನು ಆಕೆಯೊಂದಿಗೆ ಹೇಳಿಕೊಳ್ಳಲಾರದೆ ತಲೆ ಬಗ್ಗಿಸಿಕೊಂಡು ಕೂತುಕೊಂಡನಂತೆ. ನಿರಾಶಾಜನಕವಾದ ವಿಚಾರವನ್ನು ಮನಸ್ಸಿನಲ್ಲಿಟ್ಟೇ ಇಟ್ಟುಕೊಳ್ಳಲಾರದೆ ' ಒಂದು ಹಿಡಿ ಸಕ್ಕರೆಯನ್ನು ಸಂಪಾದಿಸಿಕೊಳ್ಳಲಾರದ ಶಾನುಭೋಗಿಕೆ ಏಕೆ ? ' ಎಂದು ಹೇಳಿದಳಂತೆ. ಅದರಿಂದ ಉದ್ರಿಕ್ತನಾಗಿ ಹೆಂಡತಿಯನ್ನು ಬೈದುಹೊಡೆದನಂತೆ.

ಅಧಿಕಾರಿಯಿಂದ ಆದ ಅವಮಾನಕ್ಕೆ ಆಗಲೆ ಜೀವಚ್ಛವವಾಗಿದ್ದ ಅತನು ಭಗ್ನ ಹೃದಯನಾಗಿ ಜೀವನದಲ್ಲಿ ವಿರಕ್ತಿ ಹೊಂದಿ, ಮನೆಯಲ್ಲಿ ಎಲ್ಲರೂ ನಿದ್ರೆ ಹೋದ ತರುವಾಯ ತಲೆಬಾಗಿಲ ಹಿಂಭಾಗಕ್ಕೆ ಮಂಚವನ್ನು ನಿಲ್ಲಿಸಿ ಅದರ ಮೇಲೆ ಹತ್ತಿ ಹಗ್ಗವನ್ನು ಮಾಳಿಗೆಯ ಸಂಕ್ಕೆ ಬಿಗಿದು, ಕಂಠಕ್ಕೆ ನೇಣುಹಾಕಿಕೊಂಡು ವಂಚದಿಂದ ಕೆಳಕ್ಕೆ ನೆಗೆದಸಂತೆ ನೆಲಕ್ಕೆ ಎರಡು ಲಂಗಲಗಳ ಮೇಲೆ ನೇತಾಡುತ್ತಾ ಸತ್ತುಹೋದನಂತೆ.

ಪಾಪ, ನಿರ್ಭಾಗ್ಯನಾದ ಶಾನುಭೋಗನ ಹೆಂಡತಿ ಮಕ್ಕಳು ಅನಾಥರಾದರು. ನೋಡಿ, ಆಹಾರ ಹಂಚಿಕೆಯು ಅಧಿಕಾರಿಯು ತನ್ನ ಅಧಿಕಾರವನ್ನು ದುರ್ವಿನಿಯೋಗಿಸಿದ್ದರಿಂದ ಅಸಭ್ಯನಾಗಿ ವರ್ತಿಸಿದ್ದರಿಂದ ಪಾತ್ರಸ್ಥನಾಗಿರುವ ಹಾ

ಶ್ರೀ ' ಓಂ ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಅಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತಾಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಪಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

ಮಾದರಿಯ ಮೈಸೂರು

ಮಾದರಿಯ ಮೈಸೂರಿನಲ್ಲಿ ಇದೀಗ ಮಾರಣ ಯಜ್ಞ ಕೊನೆಗೊಂಡು ಶಾಂತಿಯ ಕಿರಣಗಳು ಕಾಣಿಸಿವೆ. ಮೈಸೂರಿನ ಪ್ರಜಾ ಚಳವಳಕ್ಕೆ ಜಯದ ದೊರಕಿತು. ಆ ಜಯಕ್ಕೆ ಅವರು ಅರ್ಹರು. ಅವರು ಅನುಭವಿಸಿದ ಬಣ್ಣಬವಣೆಗಳು ವ್ಯರ್ಥವಾಗಲಿಲ್ಲ. ಅವರ ಸತ್ಯಾಗ್ರಹ ಏಸಲ್ಗುದುರಿಯಾಗಲಿಲ್ಲ ಅವರು ಹೂಡಿದ ನ್ಯಾಯವಾದ ಚಳವಳಕ್ಕೆ ಜಯವು ದೊರಕಿತು. ಮೈಸೂರಿನ ಹೆಮ್ಮೆಯ ನಾಡು ಹಬ್ಬ ದಸರಾ ಪ್ರಾರಂಭವಾಗುವುದಕ್ಕೆ ಮೊದಲೇ ಶಾಂತಿಯ ಚಿಹ್ನೆಗಳು ಮೂಡಿದುದು ಒಳಿತಾಯಿತು. ಮೈಸೂರು ಮಹಾರಾಜರು ಸಂಸ್ಥಾನಿಕ ಕಾಂಗ್ರೆಸ್ಸಿನ ಕೇಳಿಕೆಗೆ ಪೂರ್ಣ ಬಗ್ಗಿದ್ದಾರೆ. ಮೊದಲು ತಮ್ಮ ಮಂತ್ರಿ ಲೋಚಕರ ಸಲಹೆಗಳಿಗೆ ಸೊಪ್ಪುಹಾಕಿ ಅದಂತೆ ಪ್ರದರ್ಶಿಸಿದರೂ ಕೊನೆಗೆ ಜನತೆಯು ಮನಸಿಗೆ ಸಂಪೂರ್ಣ ತಬಿಬಾಗಿದ್ದಾರೆ. ಜನರ ಜವಾಬ್ದಾರಿ ಸರಕಾರದಿಂದಾಗಿ ಆದರ, ಗೌರವ, ವಿಧೇಯತೆಗಳು ದ್ವಿಗುಣಿತವಾಗದಿರಲಾರವು. ಆ ದೊಮ್ಮೆ ' ಮಾದರಿಯ ಮೈಸೂರು ' ಎಂದು ಸರ್ವತ್ರ ಸಾರಲ್ಪಟ್ಟಿರುವ ಮೈಸೂರು ಮತ್ತೊಮ್ಮೆ ಆ ಅನ್ವರ್ಥ ನಾಮಕ್ಕೆ ಅರ್ಹವೆನಿಸುವ ದಿನ ದೂರವಿರಲಾರದು ಇದೇ ರೀತಿಯ ವಿವೇಕ ಹೈದರಾಬಾದು ಕಾಶ್ಮೀರಗಳಿಗೆ ಒಂದು ದಾದರೆ ಅವುಗಳಿಗೂ ಮೋಕ್ಷ ಕಟ್ಟಿಟ್ಟದ್ದು. ಅಂತಾಗಲಿ. (ಪ್ರ)

— ಸತ್ಯವಾದಿ

ದಿನಪತ್ರಿಕೆ. ತಿಂಗಳಿಗೆ ಆರಾಣೆ

ವಾರ್ಷಿಕ ಚಂದ ಪಂಸ್ಥಳಕ್ಕೆ

ಅಂಚವೆಚ್ಚ ಸೇರಿ ರೂ. 9.

ಸೋಮವಾರದ ಸಂಚಿಕೆ ಮಾತ್ರ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12--0

For Quality Printing

L. N. Press

Sriramp et, MYSORE

ಶಕ್ತಿಸುಧಾ

ಶಕ್ತಿಹೀನತೆಗೆ ಸಂಜೀವನ

ವಿವಿಧ ವರ್ತಮಾನ

ಜೋಹನಸ್ಸುಬರ್ಗಿನ 14 ವರ್ಷ ವಯಸ್ಸಿನ ವಿವೆಯರ್ ಎಂಬ ಬಾಲಕ. ಎಂಭತ್ತು ಸಾವಿರ ಪದ ಸಂಗ್ರಹದ ' ದಿ ಮಾರ್ಕ್ ಆಫ್ ಕೇನ್ ' ಎಂಬ ಸ್ತ್ರೀ ಪುರುಷ ಲಿಂಗ ಕುರಿತು ಬರೆದ ಪುಸ್ತಕವನ್ನು ಫ್ರಾನ್ಸು ಬಹಿಷ್ಕರಿಸಿದೆ, ಲಂಡನ್ ಮಾರಾಟದಿಂದ ತಡೆದಿದೆ.

ಂ ಂ

ಕಾರ್ಯಕರ್ತರ ವಿಶೇಷ ಪ್ರಭಾವದ ಫಲಿತವಾಗಿ ಗದ್ವಾಲ್ ಸಂಸ್ಥಾನದಲ್ಲಿನ ಹನ್ನೊಂದು ಗ್ರಾಮಗಳಲ್ಲಿ ಸೇಂದಿ ಕುಡಿಯುವದನ್ನೇ ನಿಲ್ಲಿಸಿರುವರು. ಯಾರೂ ಕುಡಿಯುತ್ತಿಲ್ಲ. ದಿನಂಪ್ರತಿ ಗಾಡಿಗಳ ಮೇಲೆ ಬರುತ್ತಿರುವ ಸೇಂದಿಯೆಲ್ಲವೂ ವ್ಯರ್ಥವಾಗುತ್ತಿದೆ. ಮದ್ಯಪಾನದ ವಿಷಯದಲ್ಲಿ ಜನರ ದೃಕ್‌ಪಥವು ಬದಲಾವಣೆಯಾದಲ್ಲಿ ದೇಶಕ್ಕೆ ಎಷ್ಟೋ ಲಾಭವಾಗುವದಂತಲ್ಲಿ ಸಂದೇಹವಿಲ್ಲ.

ಂ ಂ

ಬೆಂಗಳೂರು ಅ 27— ನವೆಂಬರ್ ತಾ|| 15 ರಲ್ಲಿ ಪಂ|| ನೆಹರೂ ವರ್ಧಂತಿ. ಆ ಸುದಿನದಲ್ಲಿ ಪ್ರಭುಗಳು ಹರಿಜನ ದೇವಾಲಯ ಪ್ರವೇಶವನ್ನು ಘೋಷಿಸಬೇಕು ಎಂದು ಕೆಂಗೇರಿಯಿಂದ ಸಲಹೆ ಹೊರಟಿದೆ.

ಂ ಂ

ಲಂಡನ್ ಅ 28— ಸಾರ್ವಜನಿಕ ನಿಧಿಯಿಂದ ರಾಜಕುಮಾರಿ ವಿವಾಹದಲ್ಲಿ 60 ಸಾವಿರ ರೂ. ಖರ್ಚುಮಾಡಲಾಗುವುದು.

ಂ ಂ

ನವದೆಹಲಿ ಅ 28— ಟಿಕೆಟ್ ಇಲ್ಲದೆ ರೈಲ್ವೆ ಪ್ರಯಾಣ ಮಾಡುವುದು ಭಾರತವನ್ನು ನಾಶ ಮಾಡುವುದೆಂದು ಪ್ರಾರ್ಥನಾ ಸಭೆಯಲ್ಲಿ ಗಾಂಧೀಜೀ ನುಡಿದರು

ಂ ಂ

ಮಧುರಾ— ಉಪಹಾರ ಗೃಹಗಳ ಕೆಲಸಗಾರರು ಬೀಡಿಕೆಗಳನ್ನು ಈಡೇರಿಸದಿದ್ದಲ್ಲಿ ಮುಷ್ಕರ ಹೂಡುವುದಾಗಿ ಮಾಲೀಕರ ಸಂಘಕ್ಕೆ ಪ್ರಕಟಣೆ ಇತ್ತಿದಾರೆ

ಂ ಂ

ಹೈದರಾಬಾದು ಅ 28.... ಪಿರಂಗಾಬಾದಿನಲ್ಲಿ 15 ಸಾವಿರ ಮುಸ್ಲಿಮರು ಮೆರವಣಿಗೆ ಮಾಡಿ ಹೈದರಾಬಾದು ಸ್ವತಂತ್ರವಾಗಿರಬೇಕೆಂದರು. ಡೊಮಿನಿಯನ್ನಿಗೆ ಸೇರಿದರೆ ನೇರ ಕಾರ್ಯಾಚರಣೆಯನ್ನು ಕೈಗೊಳ್ಳುವುದಾಗಿ ತಿಳಿಸಿದರು.

ಹೈದರಾಬಾದು ಸ್ವತಂತ್ರವಾಗಿರಲಿ

ಹೈದರಾಬಾದು ಆ 27 — 'ಹೈದರಾಬಾದು ಸ್ವತಂತ್ರವಾಗಿರಲಿ' 'ನಾವು ಗುಲಾಮರಾಗಿರುವುದಿಲ್ಲ' ಎಂದು ಘೋಷಣೆ ಕೂಗುತ್ತ, ಮುಸ್ಲಿಂರ ಭಾರಿ ಗುಂಪೊಂದು ಈಸ್ಟ್‌ಕಾಲ ಹೈದರಾಬಾದು ಮುಖ್ಯಮಂತ್ರಿಗಳೂ ಹೈದರಾಬಾದು ಭಾರತ ಯೂನಿಯನ್ನಿಗೆ ಸೇರುವ ಬಗ್ಗೆಯು ಸಂಧಾನಾ ಸಮಿತಿ ಅಧ್ಯಕ್ಷರೂ ಆದ ಚತ್ತಾರಿ ನವಾಬರ ವಾಸಸ್ಥಾನಕ್ಕೆ ಹೋಯಿತು ಈ ದಿನ 9 ಘಂಟೆಗೆ ಇಂಡಿಯಾ ಡೊಮಿನಿಯನ್ನೊಂದಿಗೆ ಒಂದು ವರ್ಷ ಸಂಬಂಧ ಏಟ್ಟುಕೊಳ್ಳುವ ಕರಡು ಒಪ್ಪಂದದ ಪ್ರತಿಯೊಂದಿಗೆ ಎನ್ನಾನದಲ್ಲಿ ದೆಹಲಿಗೆ ಹೋಗುವನಿದ್ದರು ಆದರೆ ಈ ಪ್ರದರ್ಶನದ ಫಲವಾಗಿ ತಮ್ಮ ಪ್ರಯಾಣವನ್ನು ಮುಂದಕ್ಕೆ ಹಾಕಿದರು.

ಬಿಸಲಿನಿಂದ ಬೆಳೆ

ಕ್ಯಾಲಿಫೋರ್ನಿಯಾದ ವಿಶ್ವವಿದ್ಯಾಲಯದ ಸಂಶೋಧನಾಲಯದಲ್ಲಿ ಗಿಡಗಳು ಸೂರ್ಯನ ಬಿಸಲಿನೊಳಗಿನ ಚೈತನ್ಯ ಶಕ್ತಿಯನ್ನು ಹೇಗೆ ಹೀರಿಕೊಳ್ಳುತ್ತವೆಂಬುದನ್ನು ಕಂಡುಹಿಡಿಯುವ ಪ್ರಯೋಗಗಳಾಗುತ್ತಿವೆ ಈ ರಹಸ್ಯವು ತಿಳಿಯುತ್ತೆಂದರೆ ಜಗತ್ತು ಮುಂದೆ ಆಹಾರಾಭಾವದ ಸಂಕಷ್ಟದಿಂದ ಪಾರಾಗುವುದು. ಸೂರ್ಯನಲ್ಲಿರುವ ಅಗಾಧ ಶಕ್ತಿಯನ್ನು ಸಂಪೂರ್ಣವಾಗಿ ಹೀರಿಕೊಳ್ಳುವ ವ್ಯವಸ್ಥೆ ಸಸ್ಯಗಳಲ್ಲಿಲ್ಲ. ಅವು ಈಗ ಕೇವಲ ಅದರ ಶೇಕಡಾ 10 ರಿಂದ 20 ರಷ್ಟನ್ನು ಮಾತ್ರ ಹೀರಬಲ್ಲವು. ಈಗ ಸಸ್ಯಗಳು ಹೆಚ್ಚಿಚ್ಚಿನ ಸೂರ್ಯಶಕ್ತಿಯನ್ನು ಗ್ರಹಿಸಲು ಸಾಧ್ಯವಾಗುವಂತೆ ಮಾಡುವ ಒಂದು ಪ್ರಧಾನವಾದ ಕಾರಣವನ್ನು ಹುಡಿಯಲ್ಪಟ್ಟರೆ ಸಮೃದ್ಧ ಗದ್ದೆಹೊಲಗಳೂ, ತೋಟ ತೀರಗಳೂ ಸಮೃದ್ಧಿಯಾದ ಫಲವಸ್ತುಗಳಿಂದ ತುಂಬಿತುಳುಕುವಂತಾಗುವುವು (ಕೊ)

ಲೇಕ್ ಸಕ್ಸೆಸ್ ದ 26— ವಿಶ್ವ ಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ರಷ್ಯ ಮತ್ತು ಜೈನಾ ಪ್ರತಿನಿಧಿಗಳು ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರಿಗೆ ಆಗುತ್ತಿರುವ ಹಿಂಸೆಯನ್ನು ಖಂಡಿಸಿದರು

ಆಫೀಸಾದಲ್ಲಿ ಪ್ರದರ್ಶಿಸಲ್ಪಡುತ್ತಿರುವ

ಹುಚ್ಚು ಮನುಷ್ಯ

ಚಿತ್ರದಲ್ಲಿ — ಮಧುರಂ

॥ ವಂದೇ ಮಾತರಂ ॥

ಶ್ರೇಷ್ಠವಾದ

ರಾಜಪುರ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟಿದ್ದು —

ಕಾಂಗ್ರೆಸ್

(ರಿಜಿಸ್ಟರ್ಡ್)

ಮುಂಗಳೂರು

ಬೀಡಿಗಳು

ಜೆ ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ಮಿನಸ್, ಮೈಸೂರು

ಐಟಿಯಾಲ್

ಟ್ರೇಡ್ ITL ಮಾರ್ಕ್

ಐಟಿಯಾಲ್ ಒಂದು ಅದ್ಭುತ ಕ್ರಿಮಿನಾಶಿನಿ. ಗೊತ್ತಾದ ಪ್ರಮಾಣದಲ್ಲಿ ನೀರಿನೊಡನೆ ಬೆರಿಸಿ, ಗಾಯಗಳನ್ನು ತೊಳೆಯುವುದು, ಜಾಯಿಲೆಯವರ ಕೊಠಡಿಗಳನ್ನು ತೊಳೆಯುವುದು, ಬಟ್ಟೆಗಳನ್ನು ಒಗೆದು ಶುಚಿ ಮಾಡುವುದು, ಇತ್ಯಾದಿ ಕೆಲಸಗಳಿಗೆ ನೆರವಾಗುವ ಸಂಸಾರ ಸೇವಕ.

ಹಿತವಾದ ಇನಿದ ವಾಸನೆಯು ಮನಸ್ಸನ್ನು ಹರ್ಷಗೊಳಿಸುವುದು.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..

Malleswaram P. O. Bangalore

ಉಡುಪುಗಳನ್ನು ಅತಿ ಜೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ನೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ.

ಈ ಸಾಬೂನನ್ನು ಇನಿತ್ತು ಉಪಯೋಗಿಸಿ ನೋಡಿ;

ಆದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು

ಸಾಬೂನು

ಕೊಳಕು ಬಟ್ಟೆಗಳನ್ನು

ಸ್ವಚ್ಛಗೊಳಿಸುವುದು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

Office of the Municipal Engineer

City Municipal Council

Mysore, dated 11-10-47

NOTIFICATION

Sealed tenders will be received up to 4 p.m. on 5th November 1947 by the Municipal Engineer for Putting up Expanded Metal to the Eleven Araeanut Shops in Devara Market.

Each tender must be accompanied with a challan for having remitted Rs. 230 in the Municipal Treasury as earnest money.

For full particulars please see the detailed notification on the notice Board.

S. NARAYANASWAMY

Municipal Engineer